ಸಿ.ಮಿಸ್.ನಂಃ 1893/2022.

**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 11.04.2022.</u>**

**<u>ಮುಖ್ಯ ವಿಚಾರಣೆಃ ಶ್ರೀ ಬಿ.ಎಸ್. ಅರ್ಜಿದಾರರ ಪರ ವಕೀಲರಿಂದಃ</u>**

ನಾನು ಈ ಪ್ರಕರಣದಲ್ಲಿ ಅರ್ಜಿದಾರರಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಮಾಣ ಪತ್ರದಲ್ಲಿ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರಗಳಲ್ಲಿ ಕಂಡು ಬರುವ ಸಹಿ ನನ್ನದೆ ಇರುತ್ತದೆ.

ನಾನು ನನ್ನ ಜನನ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿದಾಗ ಎದುರುದಾರರು ನನ್ನ ಜನನದ ದಿನಾಂಕವು ಅವರ ದಾಖಲೆಗಳಲ್ಲಿ ನಮೂದು ಆಗಿರುವುದಿಲ್ಲ ಎಂದು ಅಲಭ್ಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

ನಾನು ದಿನಾಂಕಃ 10.10.1998 ರಂದು ಬೆಂಗಳೂರಿನ ನನ್ನ ಮನೆಯಲ್ಲಿ ಜನಿಸಿರುತ್ತೇನೆ. ನನ್ನ ಜನನ ಪ್ರಮಾಣ ಪತ್ರ ವೀಸಾ ಕುರಿತು ಅವಶ್ಯ ಬೇಕಾಗಿರುತ್ತದೆ. ಆದ್ದರಿಂದ ನನ್ನ ಜನನದ ದಿ ನಾಂಕವನ್ನು ಸಂಬಂಧಪಟ್ಟ ದಾಖಲೆಗಳಲ್ಲಿ ನಮೂದು ಮಾಡಿ ನನಗೆ ನನ್ನ ಜನನ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ಆದೇಶಿಸಲು ಕೋರುತ್ತೇನೆ.

ನನ್ನ ಅರ್ಜಿಗೆ ಪೂರಕವಾಗಿಃ

1. ಎದುರುದಾರ ಕಛೇರಿಯವರು ನೀಡಿದ ಅಲಭ್ಯ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

2. ನನ್ನ ಎಸ್ ಎಸ್ ಎಲ್ ಸಿ ಅಂಕಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

3. ನನ್ನ ಬಾಬ್ತು ಆಧಾರ ಕಾರ್ಡ್ ಹಾಜರುಪಡಿಸಿದ್ದು ಈ ದಾಖಲೆಯನ್ನು ಹೋಲಿಕೆ ಮಾಡಿ ನೋಡಲಾಗಿ ದಾಖಲೆಯಲ್ಲಿನ ಸಂಗತಿಗಳು ಸರಿ ಇರುವ ಕಾರಣ ಅಸಲು ದಾಖಲೆಯನ್ನು ಸಾಕ್ಷಿದಾರರಿಗೆ ಹಿಂದುರುಗಿಸುತ್ತ ನೋಟರೈಜ್ಡ್ ನಕಲನ್ನು ನಿಪಿ-3 ಎಂದು ಗುರುತಿಸಲಾಯಿತು.

4. ನನ್ನ ಬಾಬ್ತು ರಹದಾರಿ ಪತ್ರ ಹಾಜರುಪಡಿಸಿದ್ದು ಈ ದಾಖಲೆಯನ್ನು ಹೋಲಿಕೆ ಮಾಡಿ ನೋಡಲಾಗಿ ದಾಖಲೆಯಲ್ಲಿನ ಸಂಗತಿಗಳು ಸರಿ ಇರುವ ಕಾರಣ ಅಸಲು ದಾಖಲೆಯನ್ನು ಸಾಕ್ಷಿದಾರರಿಗೆ ಹಿಂದುರುಗಿಸುತ್ತ ನೋಟರೈಜ್ಡ್ ನಕಲನ್ನು ನಿಪಿ-4 ಎಂದು ಗುರುತಿಸಲಾಯಿತು.

5. ನನ್ನ ತಂದೆ ತಾಯಿಯ ಬಾಬ್ತು ಆಧಾರ ಕಾರ್ಡ್ ಹಾಜರುಪಡಿಸಿದ್ದು ಈ ದಾಖಲೆಯನ್ನು ಹೋಲಿಕೆ ಮಾಡಿ ನೋಡಲಾಗಿ ದಾಖಲೆಯಲ್ಲಿನ ಸಂಗತಿಗಳು ಸರಿ ಇರುವ ಕಾರಣ ಅಸಲು ದಾಖಲೆಯನ್ನು ಸಾಕ್ಷಿದಾರರಿಗೆ ಹಿಂದುರುಗಿಸುತ್ತ ನೋಟರೈಜ್ಡ್ ನಕ ಲುಗಳನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>** ಶ್ರೀಮತಿ ಜಿ ಬಿ ವಕೀಲರಿಂದ ಎದುರುದಾರರ ಪರವಾಗಿಃ

ನಿಪಿ-1 ರಿಂದ ನಿಪಿ-6 ರ ದಾಖಲೆಗಳನ್ನು ನಾನೇ ಸೃಷ್ಟಿ ಮಾಡಿಕೊಂಡು ತಂದು ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಹುಟ್ಟಿಲ್ಲ ಅಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ,

13ನೇ ಅ ಮು ಮ ದಂ ನ್ಯಾ.